2016 ಕ.ತೀ.ವ. 626

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎಚ್.ಜಿ. ರಮೇಶ್

**ಮೂಗಣ್ಣ ಮತ್ತು ಇತರರು –ವಿರುದ್ಧ– ಇಫ್ಕೋ ಟೋಕಿಯೋ ಜನರಲ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್ ಮತ್ತು ಇನ್ನೊಬ್ಬರು ***

ಮೋಟಾರು ವಾಹನ ಅಧಿನಿಯಮವು ಕಲಂ 173(1) ರಡಿಯಲ್ಲಿ ಸಂಕೀರ್ಣ ಮೊದಲನೇ ಮೇಲ್ಮನವಿಗಳು.

1988ರ ಮೋಟಾರು ವಾಹನ ಅಧಿನಿಯಮ ಕಲಂ 149(2)(ಎ)ರಡಿಯಲ್ಲಿನ ಷರತ್ತುಗಳನ್ನು ವಿಮಾ ಪಾಲಿಸಿಯಲ್ಲಿ ನಮೂದಿಸಬೇಕಾದ ಅವಶ್ಯಕತೆಯು ಇರುವುದೇ ಎಂಬುದು ಸದರಿ ಮೇಲ್ಮನವಿಗಳ ಮೂಲಭೂತ ಪ್ರಶ್ನೆ.

ನಿಯಮಗಳ ಉಲ್ಲಂಘನೆಯಾಗಿದೆ ಎಂದು ವಿಮಾ ಕಂಪೆನಿಯು ಪ್ರತಿರಕ್ಷೆಯನ್ನು ತೆಗೆದುಕೊಳ್ಳಬೇಕಾದಲ್ಲಿ ಅದು 1988ರ ಮೋಟಾರು ವಾಹನ ಅಧಿನಿಯಮ ಕಲಂ 149(2)(ಎ)ರಡಿಯಲ್ಲಿನ ಷರತ್ತುಗಳನ್ನು ವಿಮಾ ಪಾಲಿಸಿಯಲ್ಲಿ ನಮೂದಿಸಬೇಕಾಗಿರುತ್ತದೆ. ಸದರಿ ಪ್ರಕರಣದಲ್ಲಿ ವಿಮಾಪಾಲಿಸಿಯಲ್ಲಿ ಷರತ್ತುಗಳನ್ನು ನಮೂದಿಸದ ಕಾರಣ ಮೇಲ್ಮನವಿಗಳನ್ನು ಪುರಸ್ಕರಿಸಿದ ಉಚ್ಚ ನ್ಯಾಯಾಲಯವು ನ್ಯಾಯಾಧಿಕರಣದ ಐತೀರ್ಪನ್ನು ಮಾರ್ಪಾಡು ಮಾಡಿ ಆದೇಶ ನೀಡಿದೆ.

**ಎಂ.ಎಫ್.ಎ. ಸಂ. 2097/2011, 2096/2011 ಮತ್ತು 1904/2011:**
ಮೇಲ್ಮನವಿದಾರರ ಪರ: ಶ್ರೀ ಚಂದ್ರಚೂಡ, ವಕೀಲರು.

**ಎಂ.ಎಫ್.ಎ. ಸಂ. 2097/2011:**
1ನೇ ಎದುರುದಾರರ ಪರ: ಶ್ರೀ ಆರ್. ಶ್ರೀನಿವಾಸ, ವಕೀಲರು, (ಗೈರು ಹಾಜರಿ)
2ನೇ ಎದುರುದಾರರ ಪರ: ಶ್ರೀ ಆರ್. ಜೈಪ್ರಕಾಶ್, ವಕೀಲರು (ಗೈರು ಹಾಜರಿ)

*ಸಂಕೀರ್ಣ ಮೊದಲನೇ ಮೇಲ್ಮನವಿ ಸಂ.2097/2011(ಎಂ.ವಿ) ಮತ್ತು ಇತರ ಸಂಬಂಧಿತ ಮೇಲ್ಮನವಿಗಳು, ದಿನಾಂಕ: 13ನೇ ಅಕ್ಟೋಬರ್ 2015.

**ಎಂ.ಎಫ್.ಎ. ಸಂ. 2096/2011:**
1ನೇ ಎದುರುದಾರರ ಪರ: ಶ್ರೀ ಓ. ಮಹೇಶ್, ವಕೀಲರು
2ನೇ ಎದುರುದಾರರಿಗೆ: ಜಾರಿಗೊಳಿಸಲಾಗಿದೆ ಹಾಗೂ ಪ್ರತಿನಿಧಿಸಿರುವುದಿಲ್ಲ.

**ಎಂ.ಎಫ್.ಎ. ಸಂ. 1904/2011:**
1ನೇ ಎದುರುದಾರರ ಪರ: ಶ್ರೀ ಎ.ಎನ್. ಕೃಷ್ಣಸ್ವಾಮಿ, ವಕೀಲರು (ಗೈರುಹಾಜರಿ)
2ನೇ ಎದುರುದಾರರಿಗೆ: ಜಾರಿಗೊಳಿಸಲಾಗಿದೆ ಹಾಗೂ ಪ್ರತಿನಿಧಿಸಿರುವುದಿಲ್ಲ.

## ತೀರ್ಪು

**ನ್ಯಾಯಮೂರ್ತಿ ಶ್ರೀ ಎಚ್.ಜಿ. ರಮೇಶ್(ಮೌಖಿಕ)** :

ಮೋಟಾರು ವಾಹನಗಳ ಅಧಿನಿಯಮ, 1988ರ 149(2)(ಎ) ಪ್ರಕರಣದಲ್ಲಿ ತಿಳಿಸಿರುವ ಷರತ್ತುಗಳ ಪೈಕಿ ಯಾವುದಾದರೂ ಷರತ್ತು ಉಲ್ಲಂಘನೆಯಾಗಿದೆ ಎಂದು ಪ್ರತಿರಕ್ಷೆಯನ್ನು ತೆಗೆದುಕೊಳ್ಳುವುದಕ್ಕೆ ವಿಮಾ ಪಾಲಿಸಿಯಲ್ಲಿ ಆ ಷರತ್ತುಗಳನ್ನು ನಮೂದಿಸುವುದು ಒಂದು ಪೂರ್ವ ಷರತ್ತಾಗಿದೆಯೇ?

ಇದು ಈ ಮೇಲ್ಮನವಿಗಳಲ್ಲಿ ನಿರ್ಧರಿಸಬೇಕಾದ ಪ್ರಶ್ನೆಯಾಗಿದೆ. ಈ ಪ್ರಶ್ನೆಗೆ 'ಹೌದು' ಎಂದು ಸಕಾರಾತ್ಮಕ ಉತ್ತರವನ್ನು ನೀಡಲಾಗಿದೆ.

**2.** ಕ್ಲೇಮುದಾರರು ಈ ಮೂರು ಮೇಲ್ಮನವಿಗಳನ್ನು, ಅನುಕ್ರಮವಾಗಿ ಎಂವಿಸಿ ಸಂ.8580/2008, 8773/2008 ಮತ್ತು 8579/2008ರಲ್ಲಿ ಹೊರಡಿಸಲಾದ ದಿನಾಂಕ 20.10.2010ರ ತೀರ್ಪು ಮತ್ತು ಐತೀರ್ಪಿನ ವಿರುದ್ಧ ಸಲ್ಲಿಸಿದ್ದಾರೆ. ನಾನು ಈ ಎಲ್ಲಾ ಮೂರು ಮೇಲ್ಮನವಿಗಳಲ್ಲಿನ ಮೇಲ್ಮನವಿದಾರರ ಪರ ಮಾನ್ಯ ನ್ಯಾಯವಾದಿಯ ಮತ್ತು ಎಂಎಫ್ಎ ಸಂ.2096/2011ರಲ್ಲಿನ 1ನೇ ಎದುರುದಾರ – ವಿಮಾ ಕಂಪನಿಯ ಪರ ಮಾನ್ಯ ನ್ಯಾಯವಾದಿಯ ಅಹವಾಲುಗಳನ್ನು ಆಲಿಸಿದ್ದೇನೆ. ಎಂಎಫ್ಎ ಸಂ. 2097/2011 ಮತ್ತು 1904/2011ರಲ್ಲಿನ ಎದುರುದಾರರ ಪರ ಮಾನ್ಯ ನ್ಯಾಯವಾದಿಗಳು ಗೈರುಹಾಜರಾಗಿರುತ್ತಾರೆ.

3. ಆಟೋರಿಕ್ಷಾ ಕ್ಯಾಬ್ ಅನ್ನು ಅಪಘಾತದ ಸಮಯದಲ್ಲಿ ಪರವಾನಗಿ ಪ್ರದೇಶದ ಹೊರಗೆ ಬಳಸಲಾಗುತ್ತಿತ್ತು ಎಂಬಷ್ಟು ಮಟ್ಟಿಗೆ ಅದನ್ನು ಪರವಾನಗಿ ಷರತ್ತಿಗೆ ವಿರುದ್ಧವಾಗಿ ಬಳಸಲಾಗಿತ್ತು ಎಂಬ ಆಧಾರದ ಮೇಲೆ ಐತೀರ್ಪು ಮೊತ್ತಗಳನ್ನು ಸಂದಾಯ ಮಾಡುವ ಹೊಣೆಯಿಂದ 1ನೇ ಎದುರುದಾರ ವಿಮಾ ಕಂಪನಿಯನ್ನು ವಿಮೋಚನೆಗೊಳಿಸುವಲ್ಲಿ ಮೋಟಾರು ಅಪಘಾತಗಳ ಕ್ಲೇಮುಗಳ ನ್ಯಾಯಾಧಿಕರಣವು ('ನ್ಯಾಯಾಧಿಕರಣ') ಕಾನೂನಾತ್ಮಕವಾಗಿ ದೋಷಪೂರ್ಣವಾಗಿದೆ ಎಂಬುದು ಈ ಎಲ್ಲಾ ಮೂರು ಮೇಲ್ಮನವಿಗಳಲ್ಲಿ ಮೇಲ್ಮನವಿದಾರರ ಪರ ಮಾನ್ಯ ನ್ಯಾಯವಾದಿಗಳು ಮಂಡಿಸಿದ ಏಕಮಾತ್ರ ವಾದವಾಗಿದೆ. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, ಮೋಟಾರು ವಾಹನಗಳ ಅಧಿನಿಯಮ, 1988ರ ('ಅಧಿನಿಯಮ') 149(2) (ಎ)(i)(ಸಿ) ಪ್ರಕರಣದಲ್ಲಿ ತಿಳಿಸಲಾದ ಷರತ್ತಿನ ಉಲ್ಲಂಘನೆಯ ಆಧಾರದ ಮೇಲೆ ನ್ಯಾಯಾಧಿಕರಣವು ವಿಮಾಕರ್ತನನ್ನು ಹೊಣೆಗಾರಿಕೆಯಿಂದ ವಿಮುಕ್ತಿಗೊಳಿಸಿದೆ.

4. ನ್ಯಾಯಾಧಿಕರಣದ ಈ ಕೆಳಕಂಡ ತರ್ಕವನ್ನು ಇಲ್ಲಿ ಉಲ್ಲೇಖಿಸುವುದು ಸಮಂಜಸವಾಗುತ್ತದೆ:

> "24. . . . . . . . . . . . . . . . .
> ಸಂಬಂಧಪಟ್ಟ ಆರ್.ಟಿ.ಓ. ಪ್ರಾಧಿಕಾರವು ಸದರಿ ವಾಹನವನ್ನು ಅದರ 25 ಕಿ.ಮೀ. ಸುತ್ತಳತೆಯಲ್ಲೇ ಓಡಿಸಲು ಪರವಾನಗಿ ನೀಡಿದ್ದರೂ, ಆ ವಾಹನದ ಚಾಲಕನು ಬೆಂಗಳೂರು ನಗರದಿಂದ 25 ಕಿ.ಮೀ. ಆಚೆಗೆ ಆ ವಾಹನವನ್ನು ತೆಗೆದುಕೊಂಡು ಹೋಗಿದ್ದಾನೆ ಎಂಬುದು ಪಿ.ಡಬ್ಲ್ಯೂ.1 ಮತ್ತು ಆರ್.ಡಬ್ಲ್ಯೂ.1 ಮತ್ತು 2ರ ಸಾಕ್ಷ್ಯದಿಂದ ಮತ್ತು ನಿಶಾನೆ ಆರ್.1 ಮತ್ತು 3 ರಿಂದ ಸ್ಪಷ್ಟವಾಗಿ ತಿಳಿದುಬರುತ್ತದೆ. ಆದ್ದರಿಂದ, ಆತನು ಪರವಾನಗಿಯ ನಿಬಂಧನೆ ಮತ್ತು ಷರತ್ತುಗಳನ್ನು ಸ್ಪಷ್ಟವಾಗಿ

> ಉಲ್ಲಂಘಿಸಿದ್ದಾನೆ. . . . .. . . . . . . . . . . . .
> . . . . . . . . . . . . . . . . . . . . . . .
> ವಾಹನದ ಮಾಲೀಕನು ಸಂಬಂಧಪಟ್ಟ ಆರ್.ಟಿ.ಓ ನೀಡಿದ ಪರವಾನಗಿಯ ನಿಬಂಧನೆ ಮತ್ತು ಷರತ್ತುಗಳನ್ನು ಉಲ್ಲಂಘಿಸಿರುವುದರಿಂದ ಮತ್ತು 1ನೇ ಎದುರುದಾರ ವಿಮಾ ಕಂಪನಿ ಪರ ಮಾನ್ಯ ನ್ಯಾಯವಾದಿಯು ತಮ್ಮ ವಾದಕ್ಕೆ ಆಧಾರವಾಗಿಟ್ಟುಕೊಂಡ ತೀರ್ಪಿನ ಹಿನ್ನೆಲೆಯಲ್ಲಿ ಮತ್ತು ಅರ್ಜಿದಾರ ಮತ್ತು ಎದುರುದಾರರ ಸಮಗ್ರ ಸಾಕ್ಷ್ಯವನ್ನು ಹಾಗೂ ದಾಖಲೆಯಲ್ಲಿರುವ ಸಾಕ್ಷ್ಯಾಧಾರಗಳನ್ನೂ ಕೂಡ ಪರಿಗಣಿಸಿ, 1ನೇ ಎದುರುದಾರ ಕಂಪನಿಯು ಪರಿಹಾರ ಸಂದಾಯ ಮಾಡಲು ಹೊಣೆಗಾರನಲ್ಲವೆಂದು ಮತ್ತು ಆಪಾದಿಸಲಾದ ವಾಹನದ ಮಾಲೀಕನಾಗಿರುವ 2ನೇ ಎದುರುದಾರನು ಒಬ್ಬನೇ ಈ ಎಲ್ಲಾ ಮೂರು ಅರ್ಜಿಗಳಲ್ಲಿನ ಅರ್ಜಿದಾರರಿಗೆ ಪರಿಹಾರ ಸಂದಾಯ ಮಾಡಲು ಹೊಣೆಗಾರನೆಂಬುದು ನನ್ನ ಅಭಿಪ್ರಾಯವಾಗಿದೆ".

**5**. ಅಧಿನಿಯಮದ 149(2)ನೇ ಪ್ರಕರಣವನ್ನು ಈ ಸಂಬಂಧದಲ್ಲಿ ಈ ಕೆಳಕಂಡಂತೆ ಉಲ್ಲೇಖಿಸುವುದು ಸೂಕ್ತವಾಗುತ್ತದೆ:

> "**149. ವಿಮಾಕರ್ತರ ಕರ್ತವ್ಯ** . . . . . . . . .
> . . . . . . .
>
> (1) . . . . . . . . . . . . . . . . . . . . . .
>
> **(2)** ಯಾವುದೇ ತೀರ್ಪು ಅಥವಾ ಐತೀರ್ಪಿಗೆ ಸಂಬಂಧಿಸಿದಂತೆ, ಯಾವ ವ್ಯವಹರಣೆಗಳಲ್ಲಿ ತೀರ್ಪು

ಅಥವಾ ಐತೀರ್ಪು ಕೊಡಲಾಗಿದೆಯೋ ಆ ವ್ಯವಹರಣೆಗಳು ಪ್ರಾರಂಭವಾಗುವುದಕ್ಕೆ ಮುಂಚೆ ಆ ವ್ಯವಹರಣೆಗಳನ್ನು ಹೂಡುವ ಬಗ್ಗೆ ಸಂದರ್ಭಾನುಸಾರ ನ್ಯಾಯಾಲಯದ ಅಥವಾ ಕ್ಲೇಮುಗಳ ನ್ಯಾಯಾಧಿಕರಣದ ಮುಖಾಂತರ ವಿಮಾಕರ್ತನ ಗಮನಕ್ಕೆ ತಂದಿದ್ದ ಹೊರತು ಅಥವಾ ಅಂಥ ತೀರ್ಪು ಅಥವಾ ಐತೀರ್ಪಿಗೆ ಸಂಬಂಧಿಸಿದಂತೆ ಮೇಲ್ಮನವಿ ಇತ್ಯರ್ಥವಾಗದೆ ಇದ್ದು, ಅದರ ಮೇಲಿನ ಜಾರಿ ಕ್ರಮವನ್ನು ತಡೆಹಿಡಿದಿರುವವರೆಗೂ (1)ನೇ ಉಪ–ಪ್ರಕರಣದ ಮೇರೆಗೆ ಯಾವುದೇ ಮೊಬಲಗನ್ನು ವಿಮಾಕರ್ತನು ಸಂದಾಯ ಮಾಡತಕ್ಕದ್ದಲ್ಲ; ಮತ್ತು ಅಂಥ ಯಾವುವೇ ವ್ಯವಹರಣೆಗಳನ್ನು ಹೂಡಿರುವ ಬಗ್ಗೆ ನೋಟೀಸು ಕೊಡಲಾಗಿರುವ ವಿಮಾಕರ್ತನಿಗೆ ಅದಕ್ಕೆ ಒಬ್ಬ ಪಕ್ಷಕಾರನಾಗಿರಲು ಮತ್ತು ಈ ಕ್ರಮವನ್ನು ಈ ಕೆಳಕಂಡ ಯಾವುವೇ ಕಾರಣಗಳ ಮೇಲೆ ಪ್ರತಿರಕ್ಷಿಸಿಕೊಳ್ಳಲು ಹಕ್ಕಿರತಕ್ಕದ್ದು ಆ ಕಾರಣಗಳು ಯಾವುವೆಂದರೆ:–

**(ಎ) ಈ ಕೆಳಕಂಡ ಷರತ್ತುಗಳ ಪೈಕಿ, ವಿಮಾ ಪತ್ರದಲ್ಲಿರುವ ಒಂದು ನಿರ್ದಿಷ್ಟ ಷರತ್ತಿನ ಉಲ್ಲಂಘನೆಯಾಗಿರುವುದು, ಆ ಷರತ್ತುಗಳಾವುವೆಂದರೆ:–**

(i) ವಾಹನವನ್ನು,–

(ಎ) ವಿಮಾ ಕರಾರಿನ ದಿನಾಂಕದಂದು, ಬಾಡಿಗೆಗೆ ಅಥವಾ ಪ್ರತಿಫಲಕ್ಕಾಗಿ ವಾಹನವನ್ನು ನಡೆಸಲು ಪರ್ಮಿಟ್ಟಿನಲ್ಲಿ ಒಳಗೊಂಡಿರದ

ವಾಹನವಾಗಿದ್ದಲ್ಲಿ, ಬಾಡಿಗೆಗೆ ಅಥವಾ ಪ್ರತಿಫಲಕ್ಕಾಗಿ ಬಳಸುವುದು; ಅಥವಾ

(ಬಿ) ಆಯೋಜಿಸಲಾದ ವೇಗ ಸ್ಪರ್ಧೆಗಾಗಿ ಮತ್ತು ವೇಗದ ಪರೀಕ್ಷೆಗಾಗಿ ಬಳಸುವುದು; ಅಥವಾ

(ಸಿ) ವಾಹನವು ಸಾರಿಗೆ ವಾಹನವಾಗಿದ್ದಲ್ಲಿ, ಯಾವ ಪರ್ಮಿಟ್ಟಿನ ಮೇರೆಗೆ ಆ ವಾಹನವನ್ನು ಬಳಸಲಾಗುವುದೋ ಆ ಪರ್ಮಿಟ್ಟಿನಲ್ಲಿ ಅವಕಾಶವಿಲ್ಲದ ಉದ್ದೇಶಕ್ಕಾಗಿ ಬಳಸುವುದು; ಅಥವಾ

(ಡಿ) ವಾಹನವು ಮೋಟಾರು ಸೈಕಲ್ ಆಗಿದ್ದಾಗ, ಅದಕ್ಕೆ ಪಕ್ಕ ಕಾರನ್ನು ಜೋಡಿಸಿ ಬಳಸುವುದು; ಅಥವಾ

(ii) ಹೆಸರಿಸಲಾದ ವ್ಯಕ್ತಿ ಅಥವಾ ವ್ಯಕ್ತಿಗಳು ಅಥವಾ ಕ್ರಮಬದ್ಧವಾದ ಲೈಸೆನ್ಸು ಹೊಂದಿರದ ಯಾರೇ ವ್ಯಕ್ತಿಯು ಅಥವಾ ಚಾಲನಾ ಪರವಾನಗಿಯನ್ನು ಹೊಂದಲು ಅಥವಾ ಪಡೆಯಲು ಅನರ್ಹನಾದ ಯಾರೇ ವ್ಯಕ್ತಿಯು ಆ ಅನರ್ಹತೆಯ ಅವಧಿಯಲ್ಲಿ, ಚಾಲನೆ ಮಾಡುವುದು; ಅಥವಾ

(iii) ಯುದ್ಧ, ಅಂತರ್ಯುದ್ಧ, ದೊಂಬಿ ಅಥವಾ ಪ್ರಜಾಕ್ಷೋಭೆಯ ಪರಿಸ್ಥಿತಿಗಳಿಂದ ಉಂಟಾದ

ಅಥವಾ ಆ ಕಾರಣಕ್ಕಾಗಿ ಆದ ಹಾನಿಗಾಗಿ ಹೊಣೆಗಾರಿಕೆಯನ್ನು ಹೊರತುಪಡಿಸುವುದು; ಅಥವಾ

**(ಬಿ)** . . . . . . . . . . . . . . . . . . . .

(ಮುಖ್ಯವಾದದ್ದಕ್ಕೆ ಒತ್ತು ನೀಡಲಾಗಿದೆ)

**6**. ನಿಶಾನೆ ಆರ್.2 ಎಂದು ಸಾಕ್ಷ್ಯದಲ್ಲಿ ಗುರುತು ಮಾಡಿರುವ ವಿಮಾ ಪಾಲಿಸಿಯ ನಕಲು ಪತ್ರದಲ್ಲಿ ಕಂಡು ಬರುವಂತೆ, ಅಧಿನಿಯಮದ 149(2)(ಎ)(i)(ಸಿ) ಪ್ರಕರಣದಲ್ಲಿ ತಿಳಿಸಲಾಗಿರುವ ಯಾವುದೇ ಷರತ್ತನ್ನು ಆ ವಿಮಾ ಪಾಲಿಸಿಯಲ್ಲಿ ನಮೂದಿಸಿಲ್ಲ. ಅಧಿನಿಯಮದ 149(2)(ಎ)(i)(ಸಿ) ಪ್ರಕರಣದ ನಿಬಂಧನೆಗಳ ಅನುಸಾರ ಷರತ್ತನ್ನು ವಿಮಾ ಪಾಲಿಸಿಯಲ್ಲಿ ನಮೂದಿಸದಿರುವುದರಿಂದ ಆ ವಾಹನವನ್ನು ಪರವಾನಗಿಯು ಅನುಮತಿಸದಿರುವ ಉದ್ದೇಶಕ್ಕಾಗಿ ಬಳಸಲಾಗಿತ್ತು ಎಂಬ ಕಾರಣದ ಮೇಲೆ ಪಾಲಿಸಿಯಲ್ಲಿ ಒಳಗೊಂಡಿರುವ ರಿಸ್ಕ್‌ಗೆ ಸಂಬಂಧಿಸಿದ ಹೊಣೆಗಾರಿಕೆಯಿಂದ ವಿಮಾಕರ್ತನು ವಿಮುಕ್ತಿಗೊಳ್ಳುವಂತಿಲ್ಲ.

**7**. ವಿಮಾ ಕಂಪನಿಯ ಪರ ಮಾನ್ಯ ನ್ಯಾಯವಾದಿ ಶ್ರೀ ಓ. ಮಹೇಶ್ ಅವರು, ಅಧಿನಿಯಮದ 149(2)(ಎ)(i)(ಸಿ) ಪ್ರಕರಣದ ಅಡಿಯಲ್ಲಿ ಲಭ್ಯವಿರುವ ಪ್ರತಿರಕ್ಷೆಯು ಕಾನೂನಿನಲ್ಲಿ ಲಭ್ಯವಿರುವ ಪ್ರತಿರಕ್ಷೆಯಾಗಿದ್ದು, ಸದರಿ ಷರತ್ತನ್ನು ಪಾಲಿಸಿಯಲ್ಲಿ ನಮೂದಿಸುವ ಅಗತ್ಯವಿಲ್ಲವೆಂದು ವಾದಿಸಿದ್ದಾರೆ. ಆ ವಾದವು ಅಧಿನಿಯಮದ 149(2)(ಎ) ಪ್ರಕರಣದ ಮೇಲ್ನೋಟದ ಭಾಷೆಗೆ ವಿರುದ್ಧವಾದುದಾಗಿದೆ.

**8**. ಅಧಿನಿಯಮದ 149(2)(ಎ) ಪ್ರಕರಣದ ಮೇಲ್ನೋಟದ ವಾಚನವು, ಅಧಿನಿಯಮದ 149(2)(ಎ) ಪ್ರಕರಣದಲ್ಲಿ ತಿಳಿಸಿದ ಷರತ್ತುಗಳನ್ನು ಪಾಲಿಸಿಯಲ್ಲಿ

ನಿರ್ದಿಷ್ಟಪಡಿಸಿದ ಹೊರತು ಆ ಯಾವುದೇ ಷರತ್ತುಗಳ ಉಲ್ಲಂಘನೆಯ ಪ್ರತಿರಕ್ಷೆಯು ವಿಮಾಕರ್ತನಿಗೆ ಲಭ್ಯವಿರುವುದಿಲ್ಲ ಎಂಬುದನ್ನು ತೋರಿಸುತ್ತದೆ. ಆದ್ದರಿಂದ, ವಿಮಾ ಪಾಲಿಸಿಯಲ್ಲಿ 149(2)(ಎ) ಪ್ರಕರಣದಲ್ಲಿ ತಿಳಿಸಿದ ಷರತ್ತುಗಳನ್ನು ನಮೂದಿಸುವುದು ಆ ಯಾವುದೇ ಷರತ್ತುಗಳ ಉಲ್ಲಂಘನೆಯ ಪ್ರತಿರಕ್ಷೆಯನ್ನು ತೆಗೆದುಕೊಳ್ಳುವುದಕ್ಕೆ ಒಂದು ಪೂರ್ವ ಷರತ್ತಾಗಿರುತ್ತದೆ.

**೯**. ವಿಮಾ ಪಾಲಿಸಿಯ ಅಧಿನಿಯಮದ 149(2)(ಎ)(i)(ಸಿ) ಪ್ರಕರಣದಲ್ಲಿ ತಿಳಿಸಿದ ಷರತ್ತನ್ನು ಒಳಗೊಳ್ಳದಿರುವುದರಿಂದ, ನ್ಯಾಯಾಧಿಕರಣವು ಐತೀರ್ಪು ಮೊತ್ತಗಳನ್ನು ಸಂದಾಯ ಮಾಡುವ ಹೊಣೆಗಾರಿಕೆಯಿಂದ ವಿಮಾ ಕಂಪನಿಯನ್ನು ವಿಮುಕ್ತಿಗೊಳಿಸಿರುವುದು ತಪ್ಪಾಗಿದೆ. ಅಧಿನಿಯಮದ 149(2)(ಎ)(i)(ಸಿ) ಪ್ರಕರಣದಲ್ಲಿ ತಿಳಿಸಲಾದ ಷರತ್ತನ್ನು ವಿಮಾ ಪಾಲಿಸಿಯು ಒಳಗೊಂಡಿದೆಯೇ ಎಂಬುದನ್ನು ಪರಿಶೀಲಿಸಲು ನ್ಯಾಯಾಧಿಕರಣವು ವಿಫಲವಾಗಿದೆ. ತದನುಸಾರವಾಗಿ, ವಿಮಾ ಕಂಪನಿಯು ವಿರುದ್ಧದ ಕ್ಲೇಮು ಅರ್ಜಿಗಳನ್ನು ನ್ಯಾಯಾಧಿಕರಣವು ವಜಾಗೊಳಿಸಿರುವುದನ್ನು ತಳ್ಳಿ ಹಾಕಲಾಗಿದೆ. 1ನೇ ಎದುರುದಾರ – ವಿಮಾ ಕಂಪನಿಯು ವಾಹನ ಮಾಲೀಕ–2ನೇ ಎದುರುದಾರನೊಡನೆ ಜಂಟಿಯಾಗಿ ಮತ್ತು ಪ್ರತ್ಯೇಕವಾಗಿ ಐತೀರ್ಪು ಮೊತ್ತಗಳನ್ನು ಸಂದಾಯ ಮಾಡಲು ಹೊಣೆಗಾರರೆಂದು ನಿರ್ಣಯಿಸಲಾಗಿದೆ. ಪ್ರಶ್ನಿತ ತೀರ್ಪು ಮತ್ತು ಐತೀರ್ಪುಗಳು ತದನುಸಾರವಾಗಿ ಮಾರ್ಪಾಟುಗೊಳ್ಳುತ್ತವೆ.

ಮೇಲ್ಮನವಿಗಳನ್ನು ವಿಲೆ ಮಾಡಲಾಗಿದೆ.

---